# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 435(512) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳಿಗಾಗಿ ಎಷ್ಟು ಭೂಮಿಯನ್ನು ಸಾರ್ವಜನಿಕರಿಂದ ಪಡೆದುಕೊಳ್ಳಲು ತೀರ್ಮಾನಿಸಲಾಗಿದೆ; ಯಾವ ಯಾವ ಯೋಜನೆಗಳಿಗಾಗಿ ಭೂಸ್ವಾಧೀನಮಾಡಲಾಗಿದೆ; (ವಿವರನೀಡುವುದು) | 1. ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ತಾಲ್ಲೂಕಿನ ಕೊಲ್ಲೂರು, ಬಳ್ಕುಂಜೆ ಮತ್ತು ಉಳೆಪಾಡಿ ಗ್ರಾಮಗಳಲ್ಲಿ ಒಟ್ಟು ವಿಸ್ತೀರ್ಣ 1091.57 ಎಕರೆ ಜಮೀನು ಕೆ.ಐ.ಎ.ಡಿ.ಬಿ ಕಾಯ್ದೆ ಕಲಂ 28(1) ರ ಅಧಿಸೂಚನೆ ಸಂಖ್ಯೆ:ಸಿಐ 155 ಎಸ್.ಪಿ.ಕ್ಯೂ (ಇ) 2021 ದಿನಾಂಕ: 07-01-2022 ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಭೂಸ್ವಾಧೀನ ಪ್ರಕ್ರಿಯೆಗಳು ಚಾಲ್ತಿಯಲ್ಲಿರುತ್ತದೆ.<br><br>2. ಮಂಗಳೂರು ತಾಲ್ಲೂಕು, ಬಡಗ ಉಳಿಪಾಡಿ ಗ್ರಾಮದ ಸರ್ವೆ ನಂ. 232/4 ರಲ್ಲಿ 1.52 ಎಕರೆ ಜಮೀನಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಆ) | ಕೆಐಎಡಿಬಿ ನಿಂದ ಕೈಗಾರಿಕೆಗಾಗಿ ವಶಪಡಿಸಿಕೊಂಡಿರುವ ಭೂಮಿಯು ಅದರ ಉದ್ದೇಶಕ್ಕಾಗಿ ಬಳಕೆ ಮಾಡದೇ ಇದ್ದಾಗ ಅದನ್ನು ಮತ್ತೆ ಜಮೀನುದಾರರಿಗೆ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು) | ಕೆಐಎಡಿ ಕಾಯ್ದೆ, 1966 ರನ್ವಯ ಭೂಸ್ವಾಧೀನ ಪಡಿಸಿದ ಜಮೀನನ್ನು ಪುನಃ ಭೂಮಾಲೀಕರಿಗೆ ವಾಪಸ್ಸು ನೀಡಲು ಅವಕಾಶವಿರುವುದಿಲ್ಲ. |
| ಇ) | ಬೃಹತ್ ಕೈಗಾರಿಕೆಗಾಗಿ ಪ್ರಸ್ತುತ ಯಾವ ಯಾವ ಯೋಜನೆಗಾಗಿ ಯಾವ ಪ್ರದೇಶಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿದೆ? (ವಿವರ ನೀಡುವುದು) | ಉತ್ತರವನ್ನು ಕ್ರಮ ಸಂಖ್ಯೆ ಅ ರಲ್ಲಿ ಒದಗಿಸಿದೆ. |

**ಸಂಖ್ಯೆ: ಸಿಐ 128 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು